



## ಉತ್ತಮ ನಿರ್ದೇಶನ

ಬಹಳ ಸಮಯದ ಬಳಿಕ ಕನ್ನಡದಲ್ಲಿ ಮನೆ ಮಂದಿಯೆಲ್ಲ ಕುಳಿತು ನೋಡುವ ಧಾರಾವಾಹಿ 'ಶನಿ' ಕಲರ್ಸ್ ಕನ್ನಡ ಚಾನೆಲ್‌ನಲ್ಲಿ ಪ್ರಸಾರವಾಗುತ್ತಿದೆ. ವೇಗವಾಗಿಯೂ ಮುಂದುವರೆಯುತ್ತಿದೆ. ಅತ್ಯುತ್ತಮ ನಿರ್ದೇಶನ, ಹೊಸ ಉತ್ತಮ ನಟರಿಂದ ಕೂಡಿದ ಪೌರಾಣಿಕ ಧಾರಾವಾಹಿಯಾಗಿದ್ದು ಪ್ರಶಂಸಾರ್ಹವಾಗಿದೆ.

-ಡಾ.ಎನ್.ರಾಜಶೇಖರ್, ಕುಕ್ಕೆಸುಬ್ರಹ್ಮಣ್ಯ

## ಏನು ಮಾಯವ್ವೋ!

'ಕಿನ್ನರಿ'ಧಾರಾವಾಹಿಯಲ್ಲಿ ಕೆಲವು ಎಡವಟ್ಟುಗಳು ನುಸುಳಿವೆ. ಮಣಿ ನಕುಲ್‌ಗೆ ಐಸ್‌ಕ್ರೀಂ ಕೊಟ್ಟಾಗ ಇದ್ದ ಕಿತ್ತಳೆ ಬಣ್ಣ. ಮಣಿ ಸ್ವಲ್ಪ ತಿಂದು ಕೊಡುವಳು. ನಂತರ ನಕುಲ್ ತಿನ್ನುವಾಗ ಹಳದಿ ಬಣ್ಣ ಹಾಗೂ ದೊಡ್ಡದಾಗಿ ಇರುತ್ತದೆ. ಏನು ಮಾಯವ್ವೋ?

ಹಾಗೆಯೇ ನಿತ್ಯಾ ಮೊದಲ ಬಾರಿ ಸೀರೆ ಕೊಡಲು ಹೋದಾಗ ಸೆಕ್ಯೂರಿಟಿ ಗಾರ್ಡ್ ಇರುತ್ತಾನೆ. ಆದರೆ ಇನ್ನೊಮ್ಮೆ ರಾತ್ರಿ ಹೋದಾಗ ಸೆಕ್ಯೂರಿಟಿ ಗಾರ್ಡ್ ಇರುವುದಿಲ್ಲ. ಆರಾಮವಾಗಿ ಹಾಲ್, ಅಡುಗೆಮನೆ ಎಲ್ಲಾ ಕಡೆ ಓಡಾಡುವಳು. ಬೆಳಿಗ್ಗೆ ಇರುವ ಸೆಕ್ಯೂರಿಟಿ ಗಾರ್ಡ್ ರಾತ್ರಿ ವೇಳೆ ಇರುವುದಿಲ್ಲವೇ? ಬೆಳಿಗ್ಗೆ ಇಲ್ಲದಿದ್ದರೂ ರಾತ್ರಿ ಇರುತ್ತಾರೆ ಅಲ್ಲವೇ?

-ಎ.ಪಿ. ರಂಗನಾಥ್, ಮೈಸೂರು

## ಹಾಡು ಹಳೆಯದಾದರೇನು?

ಜನಶ್ರೀ ಚಾನೆಲ್‌ನಲ್ಲಿ 'ಹಾಡು ಹಳೆಯದಾದರೇನು?' ಕಾರ್ಯಕ್ರಮ ಪ್ರತೀದಿನ ಬರುತ್ತಿದೆ. 60ರ ದಶಕದ ಹಾಡುಗಳು, ಆ ಚಿತ್ರದ ವಿವರಣೆ, ಮಾಹಿತಿ, ಕಲಾವಿದರ ಪರಿಚಯವನ್ನು ಒಳಗೊಂಡ ಮನಸೆಳೆವ ಗೀತೆಗಳ ಕಾರ್ಯಕ್ರಮ ಇದಾಗಿದೆ. ಕೇವಲ ಸೀರಿಯಲ್‌ಗಳನ್ನೇ ನೋಡಿ ನೋಡಿ ಸಾಕಾಗಿದ್ದರೆ ಬದಲಾವಣೆಗಾಗಿ ಇಂತಹ ಒಳ್ಳೆಯ ಕಾರ್ಯಕ್ರಮವನ್ನು ನೋಡಿ.

–ಬಿ.ಎಸ್. ರಮೇಶ್, ಬೆಂಗಳೂರು

ವಾರದ ಪತ್ರ

## ಹಾಸ್ಯ ನವಿರಾಗಿರಲಿ

ಕನ್ನಡ ಝೀ ವಾಹಿನಿಯಲ್ಲಿ ಹಾಸ್ಯ ಧಾರಾವಾಹಿ ರೂಪದಲ್ಲಿ ಕಾಮಿಡಿ ಕಿಲಾಡಿಗಳು ಮತ್ತೆ ವೇದಿಕೆಗೆ ಬರುತ್ತಿದ್ದಾರೆ. ಈಗ ಆಯ್ಕೆಯಾದ ಕಲಾವಿದರು ತಮ್ಮ ಶಕ್ತಿ ಮೀರಿ ಪ್ರೇಕ್ಷಕರನ್ನು ರಂಜಿಸುವ ಪ್ರಯತ್ನದಲ್ಲಿದ್ದಾರೆ. ಈ ಸಂದರ್ಭದಲ್ಲಿ ಕಾರ್ಯಕ್ರಮ ನಿರ್ದೇಶಕರಲ್ಲಿ ಒಂದು ಮನವಿ ಏನೆಂದರೆ, ಜೀವನದಲ್ಲಿ ನಡೆಯುವ ಅನೇಕ ಘಟನೆಗಳು, ಸನ್ನಿವೇಶಗಳು ಹಾಸ್ಯದ ಹೊನಲಾಗಿರುತ್ತವೆ. ಅವುಗಳನ್ನು ಗುರುತಿಸುವ ಪ್ರಯತ್ನ ನಮ್ಮದಾಗಿರಬೇಕು. ದಯವಿಟ್ಟು ಮದ್ಯ ವ್ಯಸನ ವಿಷಯವನ್ನು ಬಳಸಿಕೊಳ್ಳುವುದು ಬೇಡ. ಕೆಲವು ಸಲ ಈ ವ್ಯಸನ ಜೀವನಕ್ಕೆ ಅನಿವಾರ್ಯ ಎಂಬ ಭಾವನೆ ಮೂಡಿಸಬಹುದು. ಸಮಾಜಕ್ಕೆ ತಪ್ಪು ಸಂದೇಶ ರವಾನೆಯಾಗಬಾರದು. ಅದರಂತೆ ಅಂಗವಿಕಲತೆಯನ್ನು ಹಾಸ್ಯಕ್ಕಾಗಿ ಬಳಸಿಕೊಳ್ಳುವುದು ಬೇಡ. ಯಾವುದೇ ಒಂದು ಸಮುದಾಯದ ಜನರ ಮನಸ್ಸಿಗೆ ನೋವು ಉಂಟು ಮಾಡುವ ಯಾವುದೇ ವಿಷಯ ಬೇಡ. ಸಮಾಜಕ್ಕೆ ಒಳ್ಳೆಯ ಆರೋಗ್ಯಕರವಾದ ಸಂದೇಶಗಳನ್ನು ರವಾನಿಸುವ ವಿಷಯಗಳನ್ನು ಆಯ್ಕೆ ಮಾಡಿಕೊಳ್ಳಲು ವಿನಂತಿಸುತ್ತೇನೆ.

-ಮೀನಾಕ್ಷಿ ಕೆ. ರಾಮಗುಂಡಿ, ಬೈಲಹೊಂಗಲ

## ಜಾಳು ಧಾರಾವಾಹಿ

ಝೀ ಕನ್ನಡ ವಾಹಿನಿಯಲ್ಲಿ 'ನಿಗೂಢ ರಾತ್ರಿ' ವಾರಕ್ಕೆ ಐದು ದಿನ ರಾತ್ರಿ 10.30ಕ್ಕೆ ಪ್ರಸಾರವಾಗುತ್ತದೆ. ಅದರಲ್ಲಿ ಹೆದರುವಂತಹ ಸನ್ನಿವೇಶಗಳಿಲ್ಲ ಮತ್ತು ಹೇಳಿಕೊಳ್ಳುವಂತಹ ನಟರಿಲ್ಲ. ಕತೆ ಜಾಳು ಜಾಳು. ಈ ಧಾರಾವಾಹಿಯನ್ನು ಮುಕ್ತಾಯ ಮಾಡುವುದು ಒಳ್ಳೆಯದು.

-ಜಯಲಕ್ಷ್ಮೀ ತೂರಗಲ್ಲ, ರಾಮದುರ್ಗ

## ಮುದ ನೀಡುವ ಯಕ್ಷ ಸಿರಿ

ಐಸಿರಿ ಚಾನೆಲ್‌ನಲ್ಲಿ ಶನಿವಾರ ಹಾಗೂ ರವಿವಾರ ರಾತ್ರಿ 10.30ಕ್ಕೆ ಪ್ರಸಾರವಾಗುವ ಯಕ್ಷಗಾನ ಚೆನ್ನಾಗಿ ಮೂಡಿಬರುತ್ತಿದೆ. ಅತ್ಯುತ್ತಮ ಯಕ್ಷಗಾನ ಪ್ರಸಂಗಗಳು ದೇಶ– ವಿದೇಶಗಳಲ್ಲೂ ನೋಡುವಂತಹ ಭಾಗ್ಯವನ್ನು 'ಯಕ್ಷ ಸಿರಿ'ಯ ಮೂಲಕ ಈ ಚಾನೆಲ್ ನೀಡಿದೆ. ಕರ್ನಾಟಕದ ಗಂಡು ಕಲೆ ಎಂದು ಖ್ಯಾತಿ ಪಡೆದ ಶಾಸ್ತ್ರಬದ್ಧ ಕಲೆ ಯಕ್ಷಗಾನ.

ಇದೇ ರೀತಿ ಪ್ರಸಿದ್ಧ ಕಲಾವಿದರ ಪೌರಾಣಿಕ ಪ್ರಸಂಗಗಳು ಪ್ರಸಾರವಾಗಲಿ. ಎಲ್ಲಾ ರೀತಿಯ ಕಲಾ ಪ್ರಕಾರಗಳು ದೇಶ–ವಿದೇಶಗಳಲ್ಲಿರುವವರಿಗೆಲ್ಲ ತಲುಪಿಸುವ ಪ್ರಯತ್ನದಲ್ಲಿರುವ ಐಸಿರಿಗೆ ಧನ್ಯವಾದಗಳು.

-ವಿ. ಗಜಾನನ ಶೇಟ್, ಶಿರಸಿ

## ಸೂಪರ್ ಸುದೀಪ್

ವೀಕೆಂಡ್ ಬಂದರೆ ಬಿಗ್‌ಬಾಸ್ ಕಾರ್ಯಕ್ರಮದಲ್ಲಿ ನಮ್ಮ ಕಿಚ್ಚ ಸುದೀಪ್ ಯಾವಾಗ ಬರುತ್ತಾರೋ ಎಂದು ಕಾತರದಿಂದ ಕಾಯುತ್ತಿರುತ್ತೇವೆ. ಸುದೀಪ್ ಅವರು ಘಟಾನುಘಟಿ ಸ್ಪರ್ಧಿಗಳನ್ನು ಮುಲಾಜಿಲ್ಲದೇ ತರಾಟೆಗೆ ತೆಗೆದುಕೊಳ್ಳುವುದು ಎಷ್ಟು ಚೆನ್ನಾಗಿರುತ್ತದೆಯೋ, ಅವರುಗಳನ್ನು ಕೀಟಲೆ ಮಾಡುತ್ತಾ, ಪೇಚಿಗೆ ಸಿಲುಕಿಸುವುದು, ನವಿರಾಗಿ ತಿದ್ದುವುದು ಕೂಡಾ ಅಷ್ಟೇ ಚೆನ್ನಾಗಿರುತ್ತದೆ. ಕಿಚನ್ ಟ್ರೈನಲ್ಲೂ ಸೆಲೆಬ್ರಿಟಿಗಳೊಂದಿಗೆ ಮಾತನಾಡುತ್ತಲೇ ತರಕಾರಿ ಹೆಚ್ಚುವುದು, ತಿನಿಸುಗಳ ರುಚಿಯನ್ನು ನಿರ್ಧರಿಸುವ ಸಣ್ಣ ಸಣ್ಣ ಟಿಪ್ ನೀಡುವುದನ್ನು ಮಾಡುವ ಕಿಚ್ಚ ಒಬ್ಬ ನುರಿತ 'ಪಾಕ ಪ್ರವೀಣ' ಕೂಡ ಹೌದು.

-ಚಂದ್ರಿಕಾ ಜೆ., ಬೆಂಗಳೂರು

## ಪ್ರತಿಭೆಯ ಖಣಿ

ಝೀ ಕನ್ನಡ ವಾಹಿನಿಯ ಅತ್ಯಂತ ಜನಪ್ರಿಯ ಮನರಂಜನಾ ಕಾರ್ಯಕ್ರಮ ಸರಿಗಮಪ ಸೀಸನ್ 14 ದಿನದಿಂದ ದಿನಕ್ಕೆ ವೀಕ್ಷಕರ ಕುತೂಹಲವನ್ನು ಹೆಚ್ಚಿಸುತ್ತಿದೆ. ಅಂತೆಯೇ ಕೆಲವು ಮನ ಮಿಡಿಯುವ ಸಂಗತಿಗಳೂ ಬಯಲಾಗುತ್ತಿವೆ. ಬಳ್ಳಾರಿಯ ಜ್ಞಾನೇಶ ವಯಸ್ಸಿನಲ್ಲಿ ಚಿಕ್ಕವನಾದರೂ ಪ್ರತಿಭೆ ಅಗಾಧವಾದುದು. ಬಡತನವಿದ್ದರೂ ಕಲಿಯುವ ಆಸಕ್ತಿ, ಕಲಿಸಲು ಆತನ ಪೋಷಕರು ಪಡುತ್ತಿರುವ ಕಷ್ಟ ಮನ ಮಿಡಿಯುವಂತಹದ್ದು. ಸ್ವತಃ ನಾದಬ್ರಹ್ಮ ಹಂಸಲೇಖಾ ಅವರೇ ಹಾಡಲು ಅವನ ಜೊತೆ ಕುಳಿತರೆಂದರೆ ಅವನ ಪ್ರತಿಭೆಯ ಮಟ್ಟದ ಅರಿವಾಗುತ್ತದೆ.

-ಕೆ.ಎನ್. ಪ್ರಭಾಕರ ಗುಪ್ತ, ಹಾಸನ

## ಮುಖ್ಯ ಕಥೆಯೆಡೆ ಗಮನವಿರಲಿ

ಝೀ ವಾಹಿನಿಯ 'ಮಹಾದೇವಿ' ಚೆನ್ನಾಗಿದೆ. ಇತ್ತೀಚಿನ ಸಂಚಿಕೆಗಳಲ್ಲಿ ಶೇಖರ್ ಹಾಗೂ ಆತನ ಪತ್ನಿ ಇಬ್ಬರೂ ಕಣ್ಮರೆಯಾಗಿದ್ದಾರೆ. ಇನ್ನು ಬಾಲ ನಟಿಯರ ಬಗ್ಗೆ ಹೇಳುವುದಾದರೆ ಸೌಗಂಧಿಕ (ವಿರೂಪಾಕ್ಷ ಶಾಸ್ತ್ರಿಗಳ ಮೊಮ್ಮಗಳು) ಪಾತ್ರ ಅತ್ಯಂತ ಕಳಪೆಯದಾಗಿದೆ. ಇಷ್ಟು ಚಿಕ್ಕ ವಯಸ್ಸಿಗೆ ಶಾಲೆಯಲ್ಲಿ ಸಹಪಾಠಿ ಹಿರಣ್ಮಯಿಗೆ ನೀಡುವ ಕಿರುಕುಳ ದುರ್ಗುಣಗಳಿಂದ ಕೂಡಿದೆ. ಇಂದು ಶಾಲೆಗಳಲ್ಲಿ ಮಕ್ಕಳು ತಮ್ಮ ತಮ್ಮ ಸಹಪಾಠಿಗೆ ಕುಚೇಷ್ಟೆ ಮಾಡುತ್ತಾ ತೊಂದರೆ ಕೊಡುವುದು ಸಹಜವೇ, ಆದರೆ ಅದನ್ನೇ ಕಿರುತೆರೆಯಲ್ಲಿ ವೈಭವವಾಗಿ ತೋರಿಸುವ ಅವಶ್ಯಕತೆಯಿದೆಯೇ? ಇನ್ನಾದರೂ ಇಂತಹ ಪಾತ್ರಗಳನ್ನೇ ಹೆಚ್ಚು ಹೆಚ್ಚು ವಿಜೃಂಭಣೆಯಿಂದ ತೋರಿಸುವ ಬದಲು ಮುಖ್ಯ ಕಥೆಯ ಕಡೆಗೆ ಗಮನ ಕೊಡುವರೇ?

-ಬಿ. ಚಾಮರಾಜ ಅರಸ್, ಮೈಸೂರು